ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಶಸ್ತ್ರಚಿಕಿತ್ಸಕರನ್ನು ನಿಯೋಜಿಸುವುದು

81 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕಳೆದ ಎರಡು ವರ್ಷಗಳಿಂದ ವೈದ್ಯರನ್ನು: ಸರ್ಜನ್‌ರನ್ನು ನೇಮಕ ಮಾಡದಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಎನ್ಟಿ, ಮತ್ತು ಕಣ್ಣಿನ ವಿಭಾಗಕ್ಕೆ ವೈದ್ಯರನ್ನು ಸರ್ಜನ್ರನ್ನು ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ನೇಮಕ ಮಾಡದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಹಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ

ಆ) ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಮಂಜೂರಾದ ಹುದ್ದೆಗಳು ಈ ಕೆಳಗಿನಂತಿವೆ :

1)	ಸರ್ಜನ್	1
2)	ಡೆಪ್ಯೂಟಿ ಸರ್ಜನ್	2
3)	ಅಸಿಸ್ಟೆಂಟ್ ಸರ್ಜನ್	4
4)	ಅಸಿಸ್ಟೆಂಟ್ ಡೆಂಟಲ್ ಸರ್ಜನ್	1
ತಜ್ಞತೆ		
1)	ಮೆಡಿಸನ್	1
2)	ಓಬಿಜಿ	1
3)	ಸರ್ಜರಿ	1
4)	ಪೀಡಿಯಾಟ್ರಿಕ್ಸ್	1
5)	ಆರ್ಥೋಪೆಡಿಕ್ಸ್	1
6)	ಅನೆಸ್ತೀಷಿಯಾ	1
7)	ಡೆಂಟಲ್	1
8)	ಅಸಿಸ್ಟೆಂಟ್ ಸರ್ಜನ್	1

ಮೇಲ್ಕಂಡ ತಜ್ಞತೆಯ ವೈದ್ಯರನ್ನು ಭರ್ತಿ ಮಾಡಿದೆ. ಈ ಆಸ್ಪತ್ರೆಗೆ ಇಎನ್ಟಿ ಮತ್ತು ಕಣ್ಣು ತಜ್ಞತೆಯ ಹುದ್ದೆಗಳು ಮಂಜೂರಾಗಿರುವ ಕಾರಣ ಆ ಹುದ್ದೆಗಳನ್ನು ಭರ್ತಿ ಮಾಡುವ ಪ್ರಮೇಯ ಉದ್ಭವಿಸುವುದಿಲ್ಲ.

ಇ) ಕಂಡಿಕೆ 'ಅ'ಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಸಾದತ್ ಆಲಿಖಾನ್: ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಂದ ಉತ್ತರ ಬಂದಿದೆ. ಚನ್ನಪಟ್ಟಣದಲ್ಲಿ ಒಂದು ನೂರು ಬೆಡ್ ಹಾಸ್ಪಿಟಲ್ ಅನ್ನು 1992ರಲ್ಲಿ ರಾಜ್ಯಪಾಲರು ಮತ್ತು ನಮ್ಮ ಮಾಜಿ ಆರೋಗ್ಯ ಮಂತ್ರಿಗಳಾದ ಜಿ.ಪುಟ್ಟಸ್ವಾಮಿಗೌಡರು ಓಪನ್ ಮಾಡಿದರು. ಆಗ ನಾವು ಎರಡು ಬೇಡಿಕೆಗಳ ಬಗ್ಗೆ ಕೇಳಿದ್ದೆವು. ಒಂದು ಐ ಸ್ಪೆಷಲಿಸ್ಟ್ ಮಂಜೂರು ಮಾಡಿ ಕೊಡಿ ಎಂದು ಕೇಳಿದ್ದೆವು. ಇ.ಎನ್.ಟಿ. ಸ್ಪೆಷಲಿಸ್ಟ್ಗೆ 1992-93ರಲ್ಲಿ ಮಂಜೂರು ಮಾಡುತ್ತೇವೆಂದು ಒಪ್ಪಿಕೊಂಡಿದ್ದರು. ಈಗ 1993-94 ಬರುತ್ತಿದ್ದರೂ ಇನ್ನೂ ಸ್ಯಾಂಕ್ಷನ್ ಆಗಿಲ್ಲ. ಡೆಂಟಲ್ ಸರ್ಜನ್ ಪೋಸ್ಟ್ ಮಾಡಿದ್ದಾರೆ.

ಪ್ರತಿ ದಿವಸ ಚನ್ನಪಟ್ಟಣದಲ್ಲಿ ಒಂದು ಸಾವಿರ ಜನರು ಔಟ್ ಪೇಷೆಂಟ್ಸ್ ಬರುತ್ತಿದ್ದಾರೆ. ಬೆಂಗಳೂರು, ಮೈಸೂರು ರಸ್ತೆಯಲ್ಲಿ ಪ್ರತಿದಿನ ಆಕ್ಸಿಡೆಂಟ್ಸ್ ಜಾಸ್ತಿಯಾಗುತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಈ ವರ್ಷ 1993-94ಕ್ಕೆ ಆದರೂ ಆ ಒಂದು ಪೋಸ್ಟ್‌ಸ್ಯಾಂಕ್ಷನ್ ಮಾಡಿಸಿಕೊಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್: ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಲ್ಲಿನ ಪರಿಸ್ಥಿತಿ ಇಲ್ಲ. ಚನ್ನಪಟ್ಟಣ ಆಸ್ಪತ್ರೆಗೆ ನಾನು ಸಮಕ್ಷಮ ಭೇಟಿ ಕೊಟ್ಟು ಪೂರ್ಣವಾಗಿ ತಪಾಸಣೆ ಮಾಡಿದಾಗ ಅಲ್ಲಿ ನಿಯಮಾನುಸಾರವಾಗಿ ಎಷ್ಟು ವೈದ್ಯರು ಇರಬೇಕು ಅಷ್ಟು ವೈದ್ಯರನ್ನು ಕೊಟ್ಟಿದ್ದೇವೆ. ಅವರು ಹೇಳಿದಂತಹ ಇ.ಎನ್.ಟಿ. ಸ್ಪೆಶಲಿಸ್ಟ್ ಹಾಗು ಕಣ್ಣು ತಜ್ಞರನ್ನು ಒದಗಿಸುವ ಸೌಲಭ್ಯ ಈಗ ಇರತಕ್ಕ ನೂರು ಹಾಸಿಗೆ ಆಸ್ಪತ್ರೆಗೆ ಕೊಡುವುದಕ್ಕಾಗುವುದಿಲ್ಲ. ಅದನ್ನು ಹೆಚ್ಚಿನ ದರ್ಜೆಗೆ ಏರಿಸಿದರೆ ಆ ಸೌಲಭ್ಯಗಳನ್ನು ಕೊಡುವುದಕ್ಕಾಗುತ್ತದೆಯೇ ಹೊರತು ಈಗ ಇರತಕ್ಕ ವ್ಯವಸ್ಥೆಯಲ್ಲಿ ಅವರ ಬೇಡಿಕೆ ಪ್ರಕಾರ ಕೊಡುವುದಕ್ಕಾಗುವುದಿಲ್ಲ. ಹೆಚ್ಚಿನ ದರ್ಜೆಗೆ ಏರಿಸಿದರೆ ಮಾತ್ರ ಆ ಸೌಲಭ್ಯವನ್ನು ಒದಗಿಸುವುದಕ್ಕಾಗುತ್ತದೆಂದು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಾದತ್ ಆಲಿ ಖಾನ್: ನೂರು ಬೆಡೆಡ್ ಆಸ್ಪತ್ರೆಯನ್ನು 200 ಬೆಡೆಡ್ ಆಸ್ಪತ್ರೆಯನ್ನಾಗಿ ಮಾಡುತ್ತೇವೆಂದು 1992-93ರಲ್ಲಿ ಕೊಟ್ಟ ಆಶ್ವಾಸನೆ ಇನ್ನೂ ಕಾರ್ಯಗತವಾಗಿಲ್ಲ. 110 ಬೆಡೆಡ್ ಹಾಸ್ಪಿಟಲ್ ಮಾಡಿದರೆ ಎರಡೂ ಸೌಲಭ್ಯ ಬರುತ್ತದೆ. ಅದು ಮಾನ್ಯ ರಾಜ್ಯಪಾಲರು ಓಪನ್ ಮಾಡಿರತಕ್ಕ ಆಸ್ಪತ್ರೆ. ತಾವು ರೆಕಾರ್ಡ್ಸ್ ತೆಗೆದು ನೋಡಿ. 1992-93ರಲ್ಲಿ ಮಂಜೂರು ಮಾಡುತ್ತೇವೆಂದು ಹೇಳಿದ್ದು ಇನ್ನೂ ಜಾರಿ ಆಗಿಲ್ಲ. ಈಗ ನಾವು 93-94ಕ್ಕೆ ಬರುತ್ತಿದ್ದೇವೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್: ನೂರು ಹಾಸಿಗೆಯುಳ್ಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕೆಂದು ಆಶ್ವಾಸನೆ ಕೊಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತು ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಆದಷ್ಟು ಜಾಗ್ರತೆ ಅದನ್ನು ಮಂಜೂರ್ಮಾಡುವ ವ್ಯವಸ್ಥೆ ಮಾಡಲಾಗುವುದು.

ಖಾಸಗಿ ಅನುದಾನಿತ ಶಾಲೆಗಳಿಗೆ ಸಹಾಯ ಧನ ನೀತಿ

156 - ಶ್ರೀ ಎ.ಕೆ. ಅನಂತ ಕೃಷ್ಣ (ಶಿವಾಜಿನಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಅನುದಾನಿತ ಶಾಲೆಗಳಲ್ಲಿ ಹೆಚ್ಚುವರಿ ಸ್ಥಳಾವಕಾಶ ನಿರ್ಮಾಣಕ್ಕಾಗಿ ಸಮಾನಾಂತರ ಆರ್ಥಿಕ ಅನುದಾನ ಸಹಾಯ ನೀಡುವ ಬಗ್ಗೆ ಸರ್ಕಾರದ ನೀತಿ ಏನು?

ಆ) ಸರ್ಕಾರವು ಸಮಾನಾಂತರ ಆರ್ಥಿಕ ಸಹಾಯ ನೀಡುವುದನ್ನು ಯಾವಾಗಿನಿಂದ ನಿಲ್ಲಿಸಿದೆ?

ಇ) ಕಟ್ಟಡ ನಿರ್ಮಾಣಕ್ಕಾಗಿ ನೀಡುವ ಸಮಾನಾಂತರ ಅನುದಾನ ಮಂಜೂರು ಮಾಡದಿರುವುದರಿಂದ ಶಾಲಿಗಳಿಗೆ ಸಾಕಷ್ಟು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಮುಖ್ಯವಾಗಿ ಅನುದಾನ ಪಡೆಯದ ಸಂಸ್ಥೆಯ ಶಾಲೆಗಳಿಗೆ ಅಂತಹ ಸಹಾಯವನ್ನು ನೀಡಲು ಕೂಡಲೇ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಉ) ಈ ವಿಚಾರದಲ್ಲಿ ಶ್ರೀಮತಿ ಕಮಾಲಾಬಾಯಿ ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಶಾಲೆಯ ಬಗ್ಗೆ ಅನುದಾನಕ್ಕಾಗಿ ಸಲ್ಲಿಸಿದ ಅರ್ಜಿಯ ಮೇಲೆ ಸರ್ಕಾರ ತೆಗೆದಕೊಂಡ ಕ್ರಮವೇನು?